Akashvani: Bangalore
National Bulletin In Kannada
17.09.2026: 13.10hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
17.09.2026: 13.10hrs
**********

ಮುಖ್ಯಾಂಶಗಳು :

1. ದೇಶದಲ್ಲಿ ಸೆಮಿಕಂಡಕ್ಟರ್ ವ್ಯವಸ್ಥೆ ಕ್ಷಿಪ್ರ ವಿಸ್ತರಣೆ ; ನಾವೀನ್ಯತೆ, ಹೂಡಿಕೆ ಹಾಗೂ ಬೆಳವಣಿಗೆಯ ಹೊಸ ಅವಕಾಶಗಳ ಸೃಷ್ಟಿ - ಪ್ರಧಾನಿ ನರೇಂದ್ರ ಮೋದಿ
2. ಸ್ಟೆಮ್ ಸೆಲ್ ಥೆರಪಿ ನಿಯಂತ್ರಣ ಕುರಿತು ಕೇಂದ್ರದಿಂದ ಎಲ್ಲ ರಾಜ್ಯಗಳಿಗೆ ಸೂಚನೆ ಬಿಡುಗಡೆ
3. ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರೈಸಿದ ಪ್ರಧಾನಿ ನರೇಂದ್ರ ಮೋದಿ ; ಇಂದಿನಿಂದ ದೇಶಾದ್ಯಂತ ಸೇವಾ ಸಂಕಲ್ಪ ಅಭಿಯಾನ ಆರಂಭ
4. ವಿಶ್ವ ಚೆಸ್ ಒಲಿಂಪಿಯಾಡ್ ; ಭಾರತದ ಮಹಿಳೆಯರು ಮತ್ತು ಪುರುಷರ ತಂಡಗಳ ಶುಭಾರಂಭ

******

ಪ್ರಧಾನಿ ನರೇಂದ್ರ ಮೋದಿ ಅವರು, ದೆಹಲಿಯ ಯಶೋಭೂಮಿಯಲ್ಲಿಂದು ಸೆಮಿಕಾನ್ ಇಂಡಿಯಾ-೨೦೨೬ ಉದ್ಘಾಟಿಸಿದರು. ಇದೇ ವೇಳೆ ಪ್ರಧಾನಿಯವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು ಮತ್ತು ದೇಶದ ಎರಡು ಸೆಮಿಕಂಡಕ್ಟರ್ ಘಟಕಗಳಲ್ಲಿ ಉತ್ಪಾದನೆಗೆ ಚಾಲನೆ ನೀಡಿದರು. ನಂತರ ಮಾತನಾಡಿದ ಪ್ರಧಾನಿ, ಒಂದೆಡೆ ಭಾರತದ ಆರ್ಥಿಕತೆ ಬೆಳೆಯುತ್ತಿದೆ. ಮತ್ತೊಂದೆಡೆ ಭಾರತದ ಮೇಲಿನ ಜಾಗತಿಕ ವಿಶ್ವಾಸವು ವೃದ್ಧಿಯಾಗುತ್ತಿದೆ. ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸಲು ದೇಶದ ಪ್ರತಿಯೊಬ್ಬ ಪ್ರಜೆಯೂ ಬದ್ಧತೆಯಿಂದ ದುಡಿಯುತ್ತಿದ್ದಾರೆ ಎಂದು ಹೇಳಿದರು.

ಧ್ವನಿ : ಪ್ರಧಾನಿ ನರೇಂದ್ರ ಮೋದಿ (೨೯ ಸೆಕೆಂಡ್‌ಗಳು)

ಭಾರತದ ಸೆಮಿಕಂಡಕ್ಟರ್ ಪೂರಕ ವ್ಯವಸ್ಥೆ ಅತ್ಯಂತ ಕ್ಷಿಪ್ರವಾಗಿ ವಿಸ್ತರಣೆಗೊಳ್ಳುತ್ತಿದೆ ಮತ್ತು ಅದು ನಾವೀನ್ಯತೆ, ಹೂಡಿಕೆ ಮತ್ತು ಬೆಳವಣಿಗೆಯ ಹೊಸ ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿದೆ ಎಂದು ಪ್ರಧಾನಿ ಹೇಳಿದರು. ಇದಕ್ಕೂ ಮುನ್ನ ಮಾತನಾಡಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ದೇಶದ ಅಭಿವೃದ್ಧಿಗೆ ಸೆಮಿಕಾನ್ ಅತ್ಯಗತ್ಯವಾಗಿದ್ದು, ಅದು ದಶಕಗಳ ಹಿಂದೆಯೇ ದೇಶಕ್ಕೆ ಬೇಕಾಗಿತ್ತು.

ಆದರೆ ಅದು ಕೈಗೂಡಿರಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ದೇಶದಲ್ಲಿ ಸೆಮಿಕಾನ್ ೨.೦ ಅಡಿ ೬ ಪ್ರಮುಖ ವಿಷಯಗಳಿಗೆ ಒತ್ತು ನೀಡಿ, ಸೆಮಿಕಂಡಕ್ಟರ್ ಉದ್ಯಮಕ್ಕೆ ಭದ್ರ ಬುನಾದಿ ಹಾಕಲಾಗಿದೆ. ಅದರ ಪರಿಣಾಮ ಮುಂದಿನ ದಿನಗಳಲ್ಲಿ ಹಲವು ಮಹತ್ವದ ಪರಿವರ್ತನೆಗಳನ್ನು ಕಾಣಬಹುದಾಗಿದೆ ಎಂದರು.

ಧ್ವನಿ : ಅಶ್ವಿನಿ ವೈಷ್ಣವ್ (೨೪ ಸೆಕೆಂಡ್‌ಗಳು)

ಮೂರು ದಿನಗಳ ಈ ಸಮಾವೇಶದಲ್ಲಿ ಸಹಭಾಗಿತ್ವ, ಹೂಡಿಕೆ, ನಾವೀನ್ಯತೆ ಮತ್ತು ಪ್ರತಿಭೆಗಳ ಪೋಷಣೆಯನ್ನು ಮಾಡುವ ಕಾರ್ಯದ ಬಗ್ಗೆ ಚರ್ಚಿಸಲು ಒತ್ತು ನೀಡಲಾಗುವುದು. ಈ ಸಮಾವೇಶದಲ್ಲಿ ೫೦ಕ್ಕೂ ಅಧಿಕ ರಾಷ್ಟ್ರಗಳ ೩೦೦ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಕಂಪನಿಗಳ ೬೦೦ ಪ್ರದರ್ಶಕರು ಭಾಗವಹಿಸಿದ್ದಾರೆ. ಜಪಾನ್, ದಕ್ಷಿಣ ಕೊರಿಯಾ, ಮಲೇಷಿಯಾ, ನೆದರ್‌ಲ್ಯಾಂಡ್ಸ್, ಸಿಂಗಾಪುರ್ ಮತ್ತು ಸ್ವಿಡನ್ ಸೇರಿ ೬ ರಾಷ್ಟ್ರಗಳ ಮಳಿಗೆಗಳನ್ನು ಸ್ಥಾಪಿಸಲಾಗಿದ್ದು, ಅವುಗಳ ಜೊತೆಗೆ ೧೨ ರಾಜ್ಯಗಳ ಮಳಿಗೆಗಳು ಮತ್ತು ಸ್ಟಾರ್ಟ್‌ಅಪ್ ಪೆವಿಲಿಯನ್ ಕೂಡ ಸ್ಥಾಪನೆಯಾಗಿದೆ. 'ಸಿಲಿಕಾನ್ ಟು ಸಿಸ್ಟಮ್ಸ್ - ಬಿಲ್ಡಿಂಗ್ ದಿ ಎಕೋಸಿಸ್ಟಮ್ಸ್' ಇದು ಸಮಾವೇಶದ ಘೋಷ ವಾಕ್ಯವಾಗಿದೆ. ಸೆಮಿಕಂಡಕ್ಟರ್ ಮತ್ತು ವಿದ್ಯುನ್ಮಾನ ಸಾಧನಗಳ ಮೌಲ್ಯ ಸರಣಿಯಲ್ಲಿರುವ ಜಾಗತಿಕ ಮತ್ತು ಭಾರತೀಯ ಕಂಪನಿಗಳು, ನೀತಿ ನಿರೂಪಕರು, ಹೂಡಿಕೆದಾರರು, ಸಂಶೋಧಕರು, ನವೋದ್ಯಮಗಳು, ಶೈಕ್ಷಣಿಕ ಸಂಸ್ಥೆಗಳು ಮತ್ತು ವಿದ್ಯಾರ್ಥಿಗಳು ಸಮಾವೇಶದಲ್ಲಿ ಭಾಗವಹಿಸಿ ನಾನಾ ವಿಷಯಗಳ ಬಗ್ಗೆ ಸಮಾಲೋಚನೆ ನಡೆಸುವರು.

**********

ಸ್ಟೆಮ್ ಸೆಲ್ ಥೆರಪಿ-ಕಾಂಡ ಕೋಶ ಚಿಕಿತ್ಸೆ ನಿಯಂತ್ರಣ ಕುರಿತಂತೆ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸಲಹಾ ಸೂಚನೆಯನ್ನು ಹೊರಡಿಸಿದೆ. ಅದರಲ್ಲಿ ಸಚಿವಾಲಯ ಅನುಮೋದಿಸಿದ ಪಟ್ಟಿಯಲ್ಲಿರುವ ರೋಗಗಳನ್ನು ಹೊಂದಿರುವವರಿಗೆ ಮಾತ್ರ ಅಂತಹ ಚಿಕಿತ್ಸೆಯನ್ನು ನೀಡಲು ಅನುಮತಿ ನೀಡಬೇಕು ಎಂದು ಸೂಚಿಸಲಾಗಿದೆ.

**********

ಪ್ರಧಾನಿ ನರೇಂದ್ರ ಮೋದಿ ಸಾರ್ವಜನಿಕ ಜೀವನದಲ್ಲಿ ೨೫ ವರ್ಷ ಪೂರ್ಣಗೊಳಿಸಿದ ಅಂಗವಾಗಿ ಬಿಜೆಪಿ ಇಂದಿನಿಂದ ದೇಶಾದ್ಯಂತ ಸೇವಾ ಸಂಕಲ್ಪ ಅಭಿಯಾನವನ್ನು ಆರಂಭಿಸಿದೆ. ಈ ಅಭಿಯಾನ

ಮುಂದಿನ ತಿಂಗಳು ೧೭ರವರೆಗೆ ನಡೆಯಲಿದ್ದು, ಅಭಿಯಾನದ ಮೊದಲ ದಿನವಾದ ಇಂದು ದೇಶದ ಹಲವೆಡೆ ಸ್ವಚ್ಛತಾ ಕಾರ್ಯಕ್ರಮಗಳು, ರಕ್ತದಾನ ಶಿಬಿರಗಳು ಮತ್ತಿತರ ಚಟುವಟಿಕೆಗಳು ನಡೆದವು. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ದೆಹಲಿಯ ಪಕ್ಷದ ಕೇಂದ್ರ ಕಚೇರಿಯಲ್ಲಿ ರಕ್ತದಾನ ಶಿಬಿರ ಉದ್ಘಾಟಿಸಿದರು. ಈ ವೇಳೆ ಅವರು, ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ಭಾರತ ಕ್ಷಿಪ್ರ ಪ್ರಗತಿ ಕಾಣುತ್ತಿದ್ದು, ೨೦೪೭ರ ವೇಳೆಗೆ ವಿಕಸಿತ ಭಾರತ ಗುರಿ ಸಾಧಿಸಲಿದೆ ಎಂದರು.

**********

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಇಂದಿನಿಂದ ದೇಶಾದ್ಯಂತ ಸೇವಾ ಸಂಕಲ್ಪ ಅಭಿಯಾನ ನಡೆಯಲಿದೆ. ಜನಸೇವೆಯೇ ದೇಶ ಸೇವೆ ಎಂಬ ಮಂತ್ರದಡಿ ಸೇವೆ ಮತ್ತು ಸುಶಾಸನ ದೂರದೃಷ್ಟಿಯೊಂದಿಗೆ ಸರ್ಕಾರ ೨೦೪೭ರ ವೇಳೆಗೆ ವಿಕಸಿತ ಭಾರತ ಗುರಿ ಸಾಧನೆಯತ್ತ ಸಾಗುತ್ತಿದೆ. ಎಲ್ಲರನ್ನು ಒಳಗೊಂಡ ಅಭಿವೃದ್ಧಿ ಮತ್ತು ಸಾಮಾಜಿಕ ಸಬಲೀಕರಣದ ಮೂಲಕ ದೇಶದ ಜನರ ಜೀವನದಲ್ಲಿ ಮಹತ್ವದ ಪರಿವರ್ತನೆಯನ್ನು ತರಲಾಗುತ್ತಿದೆ. ಅದರ ಭಾಗವಾಗಿ ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದು ಬಾಹ್ಯಾಕಾಶ ವಲಯದಲ್ಲಿ ಕೈಗೊಂಡ ಸುಧಾರಣೆಗಳ ಒಂದು ನೋಟ ಇಲ್ಲಿದೆ. ಬಾಹ್ಯಾಕಾಶವೆಂದರೆ ಭಾರತದಲ್ಲಿ ಕೇವಲ ಇಸ್ರೋ ಎಂದು ಮನೆ ಮಾತಾಗಿತ್ತು. ಆದರೆ ೨೦೨೦ರಲ್ಲಿ ಕೇಂದ್ರ ಸರ್ಕಾರ ಕೈಗೊಂಡ ಮಹತ್ವದ ಸುಧಾರಣೆಗಳ ಪರಿಣಾಮ ಖಾಸಗಿಯವರಿಗೂ ಬಾಹ್ಯಾಕಾಶ ವಲಯದಲ್ಲಿ ಮುಕ್ತ ಅವಕಾಶ ದೊರಕಿಸಿಕೊಡಲಾಯಿತು. ಖಾಸಗಿ ವಲಯದ ಬಾಹ್ಯಾಕಾಶ ಚಟುವಟಿಕೆಗಳನ್ನು ಉತ್ತೇಜಿಸಲು ಮತ್ತು ಬೆಂಬಲಿಸಲು ಇನ್ ಸ್ಪೇಸ್ ಎಂಬ ಸ್ವತಂತ್ರ ಸಂಸ್ಥೆಯನ್ನು ಹುಟ್ಟುಹಾಕಲಾಯಿತು. ಅನಂತರ ೨೦೨೩ರಲ್ಲಿ ಭಾರತದ ಬಾಹ್ಯಾಕಾಶ ನೀತಿಯನ್ನು ಪ್ರಕಟಿಸಿ, ಉಪಗ್ರಹಗಳ ಉಡಾವಣೆ ಸೇರಿದಂತೆ ಎಲ್ಲ ಚಟುವಟಿಕೆಗಳನ್ನು ಖಾಸಗಿಯವರಿಗೆ ಮುಕ್ತಗೊಳಿಸಲಾಯಿತು. ೨೦೧೪ರ ವರೆಗೆ ಭಾರತದಲ್ಲಿ ಒಂದೇ ಒಂದು ಬಾಹ್ಯಾಕಾಶ ನವೋದ್ಯಮವಿತ್ತು. ಇದೀಗ ೨೦೨೫ರಲ್ಲಿ ಸುಮಾರು ೪೪೦ ಬಾಹ್ಯಾಕಾಶ ತಂತ್ರಜ್ಞಾನ ನವೋದ್ಯಮಗಳು ನೋಂದಣಿಯಾಗಿದ್ದು, ಅವುಗಳ ಬಂಡವಾಳ ಹೂಡಿಕೆ ೬೧೮ ಮಿಲಿಯನ್ ದಾಟಿದೆ. ಇದಕ್ಕೆ ಸಾಕ್ಷಿ ಎಂದರೆ ಕಳೆದ ಜುಲೈ ೧೮ರಂದು ಖಾಸಗಿಯವರು ನಿರ್ಮಿಸಿದ ಮೊದಲ ಭಾರತೀಯ ರಾಕೆಟ್‌ನಿಂದ ಸ್ಕೈರೂಟ್ ಏರೋಸ್ಪೇಸ್ ವಿಕ್ರಮ್-೧ ವೊಂದರ ಯಶಸ್ವಿ ಉಡಾವಣೆಯಾಗಿದೆ.

**********

ಇಂದು ೭೫ನೇ ಜನ್ಮದಿನ ಆಚರಿಸಿಕೊಳ್ಳುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ರಾಷ್ಟ್ರಪತಿ, ಉಪರಾಷ್ಟ್ರಪತಿ, ಗೃಹ ಸಚಿವರು ಸೇರಿದಂತೆ ಹಲವು ಗಣ್ಯರು ಶುಭ ಕೋರಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ತಮ್ಮ ಸಂದೇಶದಲ್ಲಿ ಮೋದಿ ಅವರ ಅಸಾಧಾರಣ ಸಾರ್ವಜನಿಕ ಸೇವೆಯನ್ನು ಸ್ಮರಿಸಿ ಕಳೆದ ೨೫ ವರ್ಷಗಳಲ್ಲಿ ಮುಖ್ಯಮಂತ್ರಿಯಾಗಿ ಮತ್ತು ಪ್ರಧಾನಮಂತ್ರಿಯಾಗಿ ಅವರು ರಾಷ್ಟ್ರ ನಿರ್ಮಾಣಕ್ಕೆ ಅಪ್ರತಿಮ ಕೊಡುಗೆಯನ್ನು ನೀಡಿದ್ದಾರೆ ಎಂದು ಹೇಳಿದ್ದಾರೆ. ಉತ್ತಮ ಆಡಳಿತದ ಹಲವು ಹೆಗ್ಗುರುತುಗಳನ್ನು ಮೂಡಿಸಿರುವ ಪ್ರಧಾನಿ ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಗೆ ಅದ್ಭುತ ವೇಗವನ್ನು ತಂದುಕೊಟ್ಟಿದ್ದಾರೆ. ದೇಶವನ್ನು ಎಲ್ಲ ರೀತಿಯಲ್ಲಿ ಅಭಿವೃದ್ಧಿಯ ಪಥದತ್ತ ಕೊಂಡೊಯ್ಯುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಉಪರಾಷ್ಟ್ರಪತಿ ಡಾ.ಸಿ.ಪಿ.ರಾಧಾಕೃಷ್ಣನ್ ನರೇಂದ್ರ ಮೋದಿ ಅವರ ದೂರದರ್ಶಿ ನಾಯಕತ್ವದಲ್ಲಿ ಭಾರತ ಜಗತ್ತಿನಲ್ಲೇ ಅತ್ಯಂತ ಪ್ರಕಾಶಮಾನ ಸ್ಥಾನವನ್ನು ಅಲಂಕರಿಸುವುದಲ್ಲದೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಗಳಲ್ಲಿ ಒಂದಾಗಿದೆ ಎಂದು ಹೇಳಿದ್ದಾರೆ. ಗೃಹ ಸಚಿವ ಅಮಿತ್ ಶಾ, ಪ್ರಧಾನಿಯವರಿಗೆ ಶುಭ ಕೋರಿದ್ದಾರೆ ಮತ್ತು ನರೇಂದ್ರ ಮೋದಿ ಅವರ ಅವಿರತ ಪರಿಶ್ರಮ, ತ್ಯಾಗ ಮತ್ತು ದೂರದರ್ಶಿಯ ಸಂಕೇತವಾಗಿದ್ದಾರೆ. ದೇಶದ ಲಕ್ಷಾಂತರ ಜನರಿಗೆ ಸ್ಫೂರ್ತಿಯಾಗಿರುವ ಪ್ರಧಾನಿಯವರು ೨೦೪೭ರ ವೇಳೆಗೆ ಭಾರತವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹಲವು ಗಣ್ಯರು ಪ್ರಧಾನಿಯವರಿಗೆ ಶುಭ ಕೋರಿದ್ದಾರೆ.

**********

ಪಿಎಂ ವಿಶ್ವಕರ್ಮ ಯೋಜನೆ ಇಂದಿಗೆ ಮೂರು ವರ್ಷ ಪೂರೈಸಿದೆ. ೨೦೨೩ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಚಾಲನೆ ನೀಡಿದ ಈ ಮಹತ್ವದ ಯೋಜನೆಯಡಿ ಈವರೆಗೆ ೩೦ ಲಕ್ಷ ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದಾರೆ. ೧೮ ಬಗೆಯ ಕಸಬುಗಳಲ್ಲಿ ತೊಡಗಿರುವ ಸಾಂಪ್ರದಾಯಿಕ ವೃತ್ತಿಪರರು ಮತ್ತು ಕರಕುಶಲ ಕರ್ಮಿಗಳಿಗೆ ಈ ಯೋಜನೆಯಡಿ ಎಲ್ಲ ರೀತಿಯ ನೆರವು ನೀಡಲಾಗುವುದು. ಯೋಜನೆಯ ಕುರಿತು ಪ್ರಧಾನಿ ನರೇಂದ್ರ ಮೋದಿ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಸಂದೇಶವನ್ನು ಹಂಚಿಕೊಂಡಿದ್ದು, ನಿರ್ಮಾಣ ಸೇರಿದಂತೆ ಎಲ್ಲ ಬಗೆಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಕರಕುಶಲ ಕರ್ಮಿಗಳನ್ನು ಅಭಿನಂದಿಸಿದ್ದಾರೆ.

**********

ಉಜ್ಬೇಕಿಸ್ತಾನದ ಸಮರಖಂಡದಲ್ಲಿ ನಡೆಯುತ್ತಿರುವ ೪೬ನೇ ವಿಶ್ವ ಚೆಸ್ ಓಲಿಂಪಿಯಾಡ್‌ನಲ್ಲಿ ಭಾರತದ ಮಹಿಳೆಯರ ತಂಡ ಡೊಮಿನಿಕ್ ಗಣರಾಜ್ಯದ ವಿರುದ್ಧ ೪-೦ ಗೆಲುವಿನಿಂದ ತನ್ನ ಅಭಿಯಾನವನ್ನು ಶುಭಾರಂಭ ಮಾಡಿದೆ. ಅಗ್ರ ಶ್ರೇಯಾಂಕಿತೆ ಕೊನೆರು ಹಂಪಿ, ಫ್ರಾನ್ಸೆಸ್ಕಾ ರಾಮಿರೆಜ್ ಲುಜೋನ್ ಎದುರು ಗೆಲುವು ಸಾಧಿಸಿದರೆ, ಆರ್.ವೈಶಾಲಿ, ಮಿಗುಲಿನ ಡಿಲಾ ರೊಸಾ ಮಾರ್ಟಿನೆಜ್ ವಿರುದ್ಧ ಸುಲಭ ಜಯ ದಾಖಲಿಸಿದರು. ಆದರೆ ವಂತಿಕಾ ಅಗರ್ವಾಲ್ ಗೆಲ್ಲಲು ತುಸು ಶ್ರಮ ಪಟ್ಟರು.  ಭಾರತೀಯ ಪುರುಷರ ತಂಡವು ಸಹ ಗೆಲುವಿನೊಂದಿಗೆ ತಮ್ಮ ಅಭಿಯಾನ ಆರಂಭಿಸಿದ್ದು, ವಿಶ್ವ ಚಾಂಪಿಯನ್ ಡಿ.ಗುಕೇಶ್, ನಿಹಾಲ್ ಸರಿನ್ ಮತ್ತು ವಿದಿತ್ ಗುಜರಾತಿ ಥೈಲ್ಯಾಂಡ್ ವಿರುದ್ಧ ೩-೧ ಅಂತರದ ಭರ್ಜರಿ ಜಯ ದಾಖಲಿಸಿದೆ.

*******END*******